ಶ್ರೀ ಟಿ. ಚನ್ನಯ್ಯ.—ಈಗ ಒಂದು ಅಂದಾಜನ್ನು ತಯಾರುಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಸ್ಕೋರ್ಸ್ ಪರ್ಚೇಸ್ ಕಮಿಟಿಯವರು 17ನೇ ಫೆಬ್ರವರಿ 1955ರಲ್ಲಿ ಕೊಟೇಷನ್ ಕರೆಯಲು ಏರ್ಪಾಡು ಮಾಡಿದ್ದಾರೆ. ಆದಾದಮೇಲೆ ಸರ್ಕಾರ ಮಂಜೂರು ಮಾಡುತ್ತಾರೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅಂದಾಜನ್ನು ಯಾವಾಗ ಕಳುಹಿಸಿದ್ದಾರೆ?

ಶ್ರೀ ಟಿ. ಚನ್ನಯ್ಯ.—ತಾರೀಖು ಗೊತ್ತಿಲ್ಲ, ಬಂದಿದೆ. ಕೊಟೇಷನ್ ಕರೆಯುವ ಸ್ಥಿತಿಯಲ್ಲಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—25 ಸೈಕಲ್ ನಿಂದ 50 ಸೈಕಲ್‌ಗೆ ಬದಲಾವಣೆಯನ್ನು ಹೊರದ ವರ್ಷವೇ ಮಾಡಿದ್ದರೂ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕಾಗಲಿಲ್ಲವೆ?

ಶ್ರೀ ಟಿ. ಚನ್ನಯ್ಯ.—ಕಳೆದ ವರ್ಷ ಸ್ವಲ್ಪ ನಿಧಾನವಾಯಿತು. ಅಂತೂ ಅಂದಾಜೆಲ್ಲಾ ತಯಾರಾಗಿ ಸ್ಕೋರ್ಸ್‌ಪರ್‌ಚೇಸ್ ಕಮಿಟಿಗೆ ಕೊಟೇಷನ್ ಕರೆಯಲು ಈ ತಿಂಗಳಲ್ಲಿ ಕಳುಹಿಸಲಾಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಬೇರೆ ಕಡೆಗಳಲ್ಲಿ ಎಕ್ಸ್‌ರೇ ನಲಕರಣೆ ಕಡಮೆಯಿರುವುದರಿಂದ ತಾನೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೆಚ್ಚು ಜನರನುಗ್ಗಾಟವಾಗಿರುವುದು?

ಶ್ರೀ ಟಿ. ಚನ್ನಯ್ಯ.—ಈಗ ತುಮಕೂರಿನಲ್ಲಿ ಕ್ಷಯರೋಗದ ಆಸ್ಪತ್ರೆಯಲ್ಲಿ ಎಕ್ಸ್‌ರೇ ಸಾಧನವಿದೆ; ಸದ್ಯಕ್ಕೆ ಜನರಲ್ ಆಸ್ಪತ್ರೆಯ ರೋಗಿಗಳು ಅಲ್ಲಿ ಹೋಗಿ ಎಕ್ಸ್‌ರೇ ಪರೀಕ್ಷೆ ಮಾಡಿಸಿಕೊಳ್ಳುತ್ತಿದ್ದಾರೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಕ್ಷಯದ ಆಸ್ಪತ್ರೆಯಲ್ಲಿರುವ ಎಕ್ಸ್‌ರೇ ನಲಕರಣೆಯಿಂದ ಈಗ ಬೇರೆಯವರಿಗೆ ಅನುಕೂಲವಾಗುತ್ತಿದೆಯೆ?

ಶ್ರೀ ಟಿ. ಚನ್ನಯ್ಯ.—ಸದ್ಯಕ್ಕೆ ಎಲ್ಲರಿಗೂ ಆಗುತ್ತಿದೆ.

Ayurvedic Pandits and Unani Hakims Working under the District Boards.

Q.—452. Sri U. M. MADAPPA (Chamarajanagar).—

Will the Government be pleased to state:—

(*a*) whether the pay and allowances of the Ayurvedic Pandits and the Unani Hakims working under the District Boards in the State were not revised in accordance with G. O. No. L.B. 10721-42—L.B. 59-48-2, dated 8th June 1949;

(*b*) the scale fixed for them as per the above-said Government Order;

(*c*) whether the increase in expenditure as a consequence of the said Government Order is met by the Government or by the District Board;

(*d*) whether all the District Boards in the State have given effect to the said G.O. as stated therein from 1st January 1947;

(*e*) the names of District Boards which have given effect to the said G.O. on different dates or in different year in contravention of the directions given by the Government?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) Rs. 50-5-100.

(*c*) By the Government and the District Board in equal shares.

(*d*) No. The District Boards of Tumkur, Mandya, Mysore, Bangalore and Hassan have not given effect to the order from 1st January 1947.

(*e*) *Name of the District Board.*		*Dates on which given effect to*
Tumkur	...	1-7-1949
Mandya	...	1-1-1950
Mysore	...	1-4-1950
Bangalore	...	1-4-1950
Hassan	...	Has not given effect to the order yet.

ಶ್ರೀ ಯು. ಎಂ. ಮಾದಪ್ಪ.—ಸರ್ಕಾರಿ ಹುಕುಮಿನ ಪ್ರಕಾರ 1947ರಿಂದ ಜಿಲ್ಲಾ ಬೋರ್ಡುಗಳಿಗೆ ಕೊಡಬೇಕಾದ ಸರ್ಕಾರದ ಭಾಗದ ಹಣವನ್ನು ಎಲ್ಲಾ ಜಿಲ್ಲಾ ಬೋರ್ಡುಗಳಿಗೂ ಸರ್ಕಾರದವರು ಕೊಟ್ಟಿದ್ದಾರೆಯೇ?

ಶ್ರೀ ಟಿ. ಚನ್ನಯ್ಯ.—ಎಲ್ಲಕ್ಕೂ ಕೊಟ್ಟಿಲ್ಲ, ಕೆಲವರು ಕೊಟ್ಟಿದ್ದಾರೆ. ಹಾಸನ ಜಿಲ್ಲೆ ಏನಾ ಉಳಿದ ಎಲ್ಲಾ ಜಿಲ್ಲಾ ಬೋರ್ಡಿನವರೂ ರಿವೈಸ್ಡ್ ಗ್ರೇಡುಗಳನ್ನು ಕೊಟ್ಟಿದ್ದಾರೆ.

ಶ್ರೀ ಯು. ಎಂ. ಮಾದಪ್ಪ.—ನಾನು ಕೇಳುವುದು, ಸರ್ಕಾರಿ ಹುಕುಮು ಪ್ರಕಾರ, ರಿವೈಸ್ಡ್ ಗ್ರೇಡುಗಳಂತೆ ಸಂಬಳ ಕೊಡಲು, ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ತಾವು ಕೊಡಬೇಕಾದ ಹಣವನ್ನು ಸರ್ಕಾರದವರು ಕೊಟ್ಟಿದ್ದಾರೆಯೇ?

ಶ್ರೀ ಟಿ. ಚನ್ನಯ್ಯ.—ಕೆಲವು ಜಿಲ್ಲಾ ಬೋರ್ಡುಗಳು—ಕೋಲಾರ, ಶಿವಮೊಗ್ಗ, ಚಿಕ್ಕಮಗಳೂರು ...

ಶ್ರೀ ಯು. ಎಂ. ಮಾದಪ್ಪ.—ಜಿಲ್ಲಾ ಬೋರ್ಡುಗಳಿಗೆ ತಮ್ಮ ಕೋಟಾವನ್ನು ಸರ್ಕಾರ ಕೊಟ್ಟಿದ್ದಾರೆಯೆ—the quota that is to be given by the Government to the District Board in accordance with the G. O.?

Mr. SPEAKER.—To meet the expenditure of these hospitals.

Sri T. CHANNIAH.—Government's share will be given provided the District Boards make provision for the payment of their share. Then only Government will meet their share.

ಶ್ರೀ ಯು. ಎಂ. ಮಾದಪ್ಪ.—ಹಾಗಿದ್ದರೆ ಈ ಐದು ಜಿಲ್ಲೆಗಳಲ್ಲಿ ಯಾರೂ 1947ರಿಂದ ಆ ಹುಕುಮನ್ನು ಜಾರಿಗೆ ಕೊಟ್ಟಿಲ್ಲವೆಂದು ಅಭಿಪ್ರಾಯವೇ?

ಶ್ರೀ ಟಿ. ಚನ್ನಯ್ಯ.—ನಾನು ಹೇಳಿದ್ದೇನೆ. ಈ ಐದು ಜಿಲ್ಲೆಗಳೂ 1947 ರಿಂದ ಸರ್ಕಾರಿ ಆಜ್ಞೆಯನ್ನು ಜಾರಿಗೆ ಕೊಟ್ಟಿಲ್ಲ.

ಶ್ರೀ ಯು. ಎಂ. ಮಾದಪ್ಪ.—ತುಮಕೂರು, ಮಂಡ್ಯ ಮೈಸೂರು, ಬೆಂಗಳೂರು, ಹಾಸನ ಈ ಜಿಲ್ಲಾ ಬೋರ್ಡುಗಳು ಸರ್ಕಾರದಿಂದ ಬರಬೇಕಾದ ಕೋಟಾವನ್ನು ತೆಗೆದುಕೊಳ್ಳಲಿಲ್ಲವೆ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಯು. ಎಂ. ಮಾದಪ್ಪ.—ಸರ್ಕಾರದ ಹುಕುಮಿಗೆ ವಿರುದ್ಧವಾಗಿ ಕೆಲವು ಡಿಸ್ಟ್ರಿಕ್ಟ್ ಬೋರ್ಡಿನವರು ಒಂದು ತರಹ ಕೊಟ್ಟು ಇನ್ನು ಕೆಲವು ಡಿಸ್ಟ್ರಿಕ್ಟ್ ಬೋರ್ಡಿನವರು ಸರ್ಕಾರದ ಹುಕುಮನ್ನು ಜಾರಿಗೆ ಕೊಡದೆ ಅದಕ್ಕೆ ವಿರುದ್ಧವಾಗಿ ವರ್ತಿಸುವುದರಿಂದ, ಎಲ್ಲೆಲ್ಲ ಹುಕುಂ ಜಾರಿಗೆ ಬಂದಿಲ್ಲವೋ ಅಲ್ಲಿ ಅನ್ಯಾಯ ಮಾಡಿದಂತಾಗುವುದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಅನ್ಯಾಯವಾಗುತ್ತಿದೆ. ಇದನ್ನು Public Service Commission ತಿಳಿಸಿದ್ದಾರೆ. ಯಾವ ಡಿಸ್ಟ್ರಿಕ್ಟ್ ಬೋರ್ಡಿನವರು 1947 ರಿಂದ revised scales of pay ಕೊಟ್ಟಿಲ್ಲವೋ ಅವರು ಆ ತಾರೀಖಿನಿಂದ ಅದನ್ನು ಜಾರಿಗೆ ಕೊಡಿ ಎಂಬುದಾಗಿ L. S. G. Commissioner ರವರಿಗೆ ಬರೆದಿದ್ದಾರೆ. ಈ ರೀತಿ ಮಾಡಬೇಕೆಂದು ಸರ್ಕಾರದ ಉದ್ದೇಶವಿದೆ.

ಶ್ರೀ ಯು. ಎಂ. ಮಾದಪ್ಪ.—ಹಾಗೆಯೇ ಅದನ್ನು ಕಾರ್ಯಗತ ಯಾವಾಗ ಮಾಡುತ್ತೀರಿ? ಕಾರ್ಯಗತ ಮಾಡುತ್ತಿರೋ ಅಥವಾ ಮಾಡುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಡಿಸ್ಟ್ರಿಕ್ಟ್ ಬೋರ್ಡಿನವರು Statutory Body. ಅವರು ಒಪ್ಪದೇ ಹೋದರೆ ಸರ್ಕಾರ ಏನು ಮಾಡುವುದಕ್ಕೂ ಕಷ್ಟವಾಗುತ್ತದೆ. ಈಗ ಡಿಸ್ಟ್ರಿಕ್ಟ್ ಬೋರ್ಡ್‌ಗಳು ಸರ್ಕಾರದ ಅಧೀನಕ್ಕೆ ಬಂದಿರುವುದರಿಂದ ಈಗ ಅಷ್ಟು ಕಷ್ಟವಾಗಲಾರದು.

ಶ್ರೀ ಯು. ಎಂ. ಮಾದಪ್ಪ.—ಮುಖ್ಯ ಮಂತ್ರಿಗಳು Appropriation Bill ನ ವಿಷಯದಲ್ಲಿ ಉತ್ತರ ಹೇಳುತ್ತಾ 4-5 ದಿವಸಗಳಲ್ಲಿ ಜಾಗ್ರತೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದುದು ತಮ್ಮ ಗಮನಕ್ಕೆ ಬಂದಿದೆಯೇ? ಶ್ರೀಮಾನ್ ಬಿ. ಹುಚ್ಚೇಗೌಡರು ಇದೇ ವಿಷಯವನ್ನು ಎತ್ತಿ ಮಾತನಾಡುವಾಗ ತಾವು ಜಾಗ್ರತೆ ಕಾರ್ಯಗತ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಗೊತ್ತಿದ್ದರೆ ನನ್ನನ್ನು ಏಕೆ ಕೇಳುತ್ತೀರಿ?

Mr. SPEAKER.—That information need not have been brought to his notice.

ಶ್ರೀ ಕೆ. ಲಕ್ಕಪ್ಪ.—ಹಾಸನದ ಜಿಲ್ಲಾ ಬೋರ್ಡಿನವರು ಇದುವರೆಗೆ ಏತಕ್ಕೆ ಜಾರಿಗೆ ಕೊಡಲಿಲ್ಲ?

ಶ್ರೀ ಟಿ. ಚನ್ನಯ್ಯ.—ಬಹುಶಃ ಹಣವಿಲ್ಲ. ಹಣದ ಅಭಾವವಿಂದ ಕೊಟ್ಟಿಲ್ಲವೆಂದು ಕಾಣುತ್ತದೆ. ಯಾವ source ನಿಂದ meet ಮಾಡಬೇಕು ಎಂಬುದನ್ನು ಒಪ್ಪದೇ ಇರುವುದರಿಂದ ತಡವಾಗಿದೆ ಅದುದರಿಂದ ಸರಕಾರದವರು ಈ ವಿಷಯದಲ್ಲಿ ಬರೆದಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—ನೀವು Government Order ನ್ನು ಜಾರಿಗೆ ಕೊಡಬೇಕು ಎಂದು ಒತ್ತಾಯ ಮಾಡುವುದಕ್ಕೆ ಅಧಿಕಾರವಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಈಗ ಡಿಸ್ಟ್ರಿಕ್ಟ್ ಬೋರ್ಡ್ ಸ್ಪೆಷರ್ ಆಫೀಸರನ್ನು ನಾವೇ appoint ಮಾಡುವುದರಿಂದ ಸರ್ಕಾರದವರು ಮಾಡಿಕೊಡಬೇಕೆಂದು ಒತ್ತಾಯ ಮಾಡುವುದಕ್ಕೆ ಸಾಧ್ಯವಿದೆ.

Depots for Selling Hand-woven Cloth.

Q.—147. Sri R. MUNISWAMIAH (Bangalore North—Scheduled Caste).—

Will the Government be pleased to state :—

(*a*) the number of Depots opened for selling hand-woven cloth ;

(*b*) the places where they are situated ;

(*c*) the amount the Central Government has placed at the disposal of this Government for this purpose ?

A.—Sri H. SIDDAVEERAPPA (Minister for Home and Industries).—

(*a*) Twenty-seven for cotton fabrics ; none for woollen and silk fabrics.

(*b*) 1 Bangalore—K. R. Market
2 Bangalore—Balepet Circle
3 Kanakapura
4 Channapatna
5 Mandya
6 Mysore
7 Nanjangud
8 Chamarajanagar
9 Hassan
10 Sakleshpur
11 Arasikere
12 Channarayapatna
13 Chikmagalur
14 Shimoga
15 Bhadravati
16 Davangere
17 Hosadurga
18 Chitaldrug
19 Challakere
20 Tiptur
21 Kunigal
22 Tumkur
23 Kolar
24 K. G. F.
25 Chikballapur
26 Chintamani
27 Hospet

(*c*) Rs. 1,20,000 for starting 30 Emporia for cotton fabrics.

Rs. 20,000 for 5 Emporia for woollen fabrics.